ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ನಾವು 1996-97ನೇ ಸಾಲಿನಲ್ಲಿ ಅಂಜನಪ್ಪ ಗಾರ್ಡನ್ ಸಮುದಾಯ ಭವನಕ್ಕೆ ಆರು ಲಕ್ಷ ಎಪ್ಪತ್ತೈದು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ, ಅದಕ್ಕೆ ಈಗಾಗಲೇ ಎಸ್ಟಿಮೇಟ್ ಮಾಡಿಸಿ ತಮ್ಮ ಸೂಚನೆ ಮೇರೆಗೆ ಆ ಕೆಲಸ ಪ್ರಾರಂಭ ಮಾಡಿದ್ದೇವೆ, ಅಲ್ಲದೆ ಬಾಕಿ ಉಳಿದಿರುವಂತಹ ಕೊಳಚೆ ಪ್ರದೇಶವನ್ನು ಕಾನೂನಿನ ಅಡಿಯಲ್ಲಿ ಸಂಬಂಧಪಟ್ಟಂತಹ ಕಾರ್ಪೊರೇಷನ್‌ನಿಂದ ಬಂದಮೇಲೆ ನಾವು ಸಂಬಂಧಪಟ್ಟಂತಹ ಜಿಲ್ಲಾಧಿಕಾರಿಗಳ ಮುಖೇನ ಘೋಷಣೆ ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ.

ಶ್ರೀ ಪಿ.ಎಸ್. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಅಂಜನಪ್ಪ ಗಾರ್ಡನ್‌ನಲ್ಲಿ ಕೆಲಸ ಪ್ರಾರಂಭ ಮಾಡಿದ್ದಾರೆ, ಆದರೆ ಕಾಟನ್ ಪೇಟೆ ಮುಖ್ಯ ರಸ್ತೆಯಲ್ಲಿ ಟಿಂಬರ್ ಯಾರ್ಡ್‌ನಲ್ಲಿ ಹಲವಾರು ವರ್ಷಗಳಿಂದ ಭೂ ಮಾಲೀಕರಿಗೂ ಮತ್ತು ಕೊಳಚೆ ಪ್ರದೇಶದ ನಿವಾಸಿಗಳಿಗೂ ಇದ್ದಂತಹ ವ್ಯಾಜ್ಯಗಳು ಇವತ್ತಿನವರೆವಿಗೂ ಇತ್ಯರ್ಥ ಆಗಿಲ್ಲ. ಕೋರ್ಟ್ ಸಹ ಡೈರೆಕ್ಷನ್ ಕೊಟ್ಟಿದೆ. ನ್ಯಾಯಾಲಯದ ಆದೇಶದ ಪ್ರಕಾರ ಮಾಲೀಕನಿಗೆ ಶೇ. 50ರಷ್ಟು ಭೂಮಿ ಕೊಡಬೇಕು, ಮತ್ತು ಅಲ್ಲಿ ವಾಸ ಮಾಡುವಂತಹ ಜನರಿಗೆ ಶೇ. 50 ರಷ್ಟು ಭೂಮಿ ಕೊಡಬೇಕು ಎಂದು ಇದೆ. ಅದರ ಬಗ್ಗೆ ತಾವು ಏನು ಕ್ರಮ ಕೈಗೊಂಡಿರುವಿರಿ ಎಂದು ದಯವಿಟ್ಟು ತಿಳಿಸಬೇಕು.

ಶ್ರೀ ಹೆಚ್.ಡಿ. ರೇವಣ್ಣ : ಸನ್ಮಾನ್ಯ ಅಧ್ಯಕ್ಷರೆ, 6,75,000 ರೂ.ಗಳ ವೆಚ್ಚದಲ್ಲಿ ಮನೆಗಳ ನಿರ್ಮಾಣ ಕೆಲಸವನ್ನು ಯಾವಾಗ ಬೇಕಾದರೂ ತೆಗೆದುಕೊಳ್ಳಬಹುದೆಂದು ಮಾನ್ಯ ಸದಸ್ಯರಿಗೆ ಪೂರ್ಣ ಅಧಿಕಾರವನ್ನು ಕೊಟ್ಟಿದ್ದೇವೆ. ಆದರೆ ಅವರು ಪ್ರಪೋಸಲ್ ಕೊಟ್ಟಿರುವುದು ಅಂಜನಪ್ಪ ಗಾರ್ಡನ್‌ನ 6,75,000 ರೂಪಾಯಿಗಳಿಗೆ ಕೊಟ್ಟಿದ್ದಾರೆ. ಅದನ್ನು ಈಗ ಮಾಡಿಸುತ್ತಿದ್ದೇವೆ. ಅದರಲ್ಲಿ ಏನು ಬಾಬ್ತು ಇದೆ ಅದರ ಪೂರ್ಣ ಹಣವನ್ನು ಅವರ ಸಲಹೆ ಮೇರೆಗೆ ಕೊಡಿಸುವ ವ್ಯವಸ್ಥೆ ಮಾಡುತ್ತೇವೆ.

ಸಕಲೇಶಪುರದಲ್ಲಿ ಬಸ್ ನಿಲ್ದಾಣ ನಿರ್ಮಾಣ

138 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸಕಲೇಶಪುರದ ಬಸ್ ನಿಲ್ದಾಣದ ಬಗ್ಗೆ ಸರ್ಕಾರದ ನಿಲುವು ಏನು?

2) ನಿಲ್ದಾಣ ನಿರ್ಮಾಣದ ಕಾರ್ಯಕ್ರಮ ಯಾವಾಗ ಪ್ರಾರಂಭಿಸಲಾಗುವುದು?

3) ಇದಕ್ಕೆ ತಗಲುವ ವೆಚ್ಚ ಎಷ್ಟು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಸಕಲೇಶಪುರದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಸರ್ವೆ ನಂ. 193ರಲ್ಲಿ 3.05 ಎಕರೆ ನಿವೇಶನವನ್ನು ಸಂಸ್ಥೆಯ ವಶಕ್ಕೆ ಪಡೆಯಲಾಗಿದೆ ಸದರಿ ನಿವೇಶನವು ರಸ್ತೆಯ ಮಟ್ಟಕ್ಕಿಂತ ಸುಮಾರು 30 ಅಡಿಗಳಷ್ಟು ಕೆಳಮಟ್ಟದಲ್ಲಿರುತ್ತದೆ. ಸದರಿ ನಿವೇಶನವನ್ನು ಅಭಿವೃದ್ಧಿಪಡಿಸಿ ಬಸ್ ನಿಲ್ದಾಣ

ನಿರ್ಮಿಸಲು ಸುಮಾರು 142 ಲಕ್ಷ ರೂಪಾಯಿಗಳ ವೆಚ್ಚವನ್ನು ಅಂದಾಜು ಮಾಡಲಾಗಿದೆ. ಸಕಲೇಶಪುರದಲ್ಲಿ ಬಸ್ ನಿಲ್ದಾಣ ನಿರ್ಮಿಸಲು 97-98ನೇ ಸಾಲಿನ ಆಯವ್ಯಯದಲ್ಲಿ ರೂ. 50 ಲಕ್ಷಗಳನ್ನು ಅಳವಡಿಸಲಾಗಿದೆ. ಸದರಿ ಯೋಜನೆಯಲ್ಲಿ ನಿವೇಶನ ಅಭಿವೃದ್ಧಿ ಕೆಲಸಗಳಿಗೆ ಅಂದಾಜು ಮಾಡಿರುವ ಮೊತ್ತ 50 ಲಕ್ಷಗಳ ನಿಧಿಯನ್ನು ಜಿಲ್ಲಾಧಿಕಾರಿಗಳು, ಮಾನ್ಯ ಶಾಸಕರು, ಸಂಸದರು, ಮಲೆನಾಡು ಅಭಿವೃದ್ಧಿ ಮಂಡಳಿ ಮತ್ತು ಇತರೆ ಸ್ಥಳೀಯ ಸಂಘಗಳ ಮೂಲಕ ಪಡೆಯಲು ಕ್ರಮ ಕೈಗೊಳ್ಳಲಾಗಿದೆ.

2) ಸದರಿ ಯೋಜನೆಯ ಒಟ್ಟಾರೆ ಅಂದಾಜು ವೆಚ್ಚವು 142 ಲಕ್ಷಗಳಾಗಿರುವುದರಿಂದ, ಸದರಿ ನಿವೇಶನದ ಅಭಿವೃದ್ಧಿ ಕೆಲಸಗಳಿಗೆ ಕನಿಷ್ಟ 50 ಲಕ್ಷ ರೂಪಾಯಿಗಳ ಅನುಧಾನವನ್ನು ಮೇಲೆ ತಿಳಿಸಿರುವ ಮೂಲಗಳಿಂದ ಪಡೆಯಲಾಗುವುದು, ಕೆಲಸ ಪ್ರಾರಂಭಿಸಲಾಗುವುದು.

3) ಸದರಿ ಬಸ್ ನಿಲ್ದಾಣದ ಯೋಜನೆಗೆ ಒಟ್ಟಾರೆ ರೂ. 142 ಲಕ್ಷಗಳನ್ನು ಅಂದಾಜು ಮಾಡಲಾಗಿದೆ.

10.00 ಎ.ಎಂ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಿದ್ದಾರೆ. ತುಂಬಾ ಸಂತೋಷವಾಗತಕ್ಕಂಥ ವಿಚಾರ ಎಂದರೆ ಸುಮಾರು 25 ವರ್ಷಗಳ ಸತತ ಪ್ರಯತ್ನ ಇವೊತ್ತು ಒಂದು ರೂಪಕ್ಕೆ ಬಂದಿರತಕ್ಕಂಥದ್ದು. ಈ ರಾಜ್ಯದ ಸಾರಿಗೆ ಸಚಿವರಾದಂಥ ಸನ್ಮಾನ್ಯ ಸಿಂಧ್ಯರವರು ಹಾಗೂ ಸನ್ಮಾನ್ಯ ಬೀಳಗಿರವರಿಗೆ ಈ ಸಂದರ್ಭದಲ್ಲಿ ಅಭಿನಂದಿಸಬೇಕಾಗಿದೆ. ಈ ಕಾರ್ಯಕ್ರಮವನ್ನು ಅವರು ಈಗಾಗಲೇ ಕೈಗೆತ್ತಿಕೊಂಡಿದ್ದಾರೆ ಮತ್ತು ಮುಂದಿನ ನಾಲ್ಕನೇ ತಾರೀಖು ಅಸ್ತಿಭಾರವನ್ನು ಮಾನ್ಯ ಮುಖ್ಯಮಂತ್ರಿಗಳು, ಸಾರಿಗೆ ಮಂತ್ರಿಗಳು ಹಾಗೂ ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ಬಂದು ನೆರವೇರಿಸುವವರಿದ್ದಾರೆ. ಅದರಿಂದ ನಮ್ಮ ಕ್ಷೇತ್ರದ ಜನತೆಯ ಪರವಾಗಿ ಸರ್ಕಾರಕ್ಕೆ ಕೃತಜ್ಞತೆಯನ್ನು ಅರ್ಪಿಸುತ್ತಾ ಅದಷ್ಟು ಜಾಗೃತೆ ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆಯಿತು. ಅದಷ್ಟು ಜಾಗ್ರತೆ ಈ ಕಾರ್ಯಕ್ರಮವನ್ನು ಮುಗಿಸುತ್ತೇವೆ.

ತೀರ್ಥಹಳ್ಳಿ ಮಾರುಕಟ್ಟೆ ಪ್ರಾಂಗಣ ನಿರ್ಮಾಣ

137 - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿಯಲ್ಲಿ ಒಂದು ಮಾರುಕಟ್ಟೆ ಪ್ರಾಂಗಣ ರಚಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಪ್ರಾಂಗಣಕ್ಕಾಗಿ ಎಷ್ಟು ಹಣ ಮೀಸಲಿಡಲಾಗಿದೆ?